ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,

ಹೊನ್ನಾಳಿ

**ಸಿ.ಸಿ. ನಂ.668/2022**

ಪಿರ್ಯಾದುದಾರರು : ಸಲ್ಮಾನ್ ಖಾನ್ ಹೆಚ್ ಬಿನ್ ಹಮೀದ್ ಹೆಚ್,
35 ವರ್ಷ, ವಾಸಃ ನಂಬರ್ 45,
ಮಸೀದಿ ಹತ್ತಿರ, ಕೆ ಕೆ ರಸ್ತೆ, ಕೂಲಂಬಿ ಗ್ರಾಮ
ಹೊನ್ನಾಳಿ ತಾಲ್ಲೂಕು.

ವಿರುದ್ಧ

ಆರೋಪಿ : ಮುಖ್ಯೋಪಧ್ಯಾಯರು, ಶ್ರೀ ವೆಂಕಟೇಶ್ವರ ಶಾಲೆ ಪರವಾಗಿ
ಬಸವರಾಜ ಕಿಟಗೇರಿ ಬಿನ್ ಈರಪ್ಪ,
40 ವರ್ಷ , ವಾಸಃ ಅರಗಿನಮರ ಕ್ಯಾಂಪ್,
ಸಿಂದನೂರು ತಾಲ್ಲೂಕು, ರಾಯಚೂರು.

ಭಾ. ದಂ. ಪ್ರ. ಸಂ. ಕಲಂ. 313 ರನ್ವಯ ಆರೋಪಿಯ ಹೇಳಿಕೆ

ಪ್ರಶ್ನೆಃ 1 ಃ ನ್ಯಾಯಾಲಯದ ಮುಂದೆ ದೂರಿನೊಂದಿಗೆ ಫಿರ್ಯಾದುದಾರರು ತಮ್ಮ ಪ್ರಮಾಣಪತ್ರದಲ್ಲಿ ತಿಳಿಸಿರುವ ವಿಚಾರವನ್ನು ತಿಳಿದುಕೊಂಡಿದ್ದೀರಾ?

ಉತ್ತರ ಃ

ಪ್ರಶ್ನೆಃ 2ಃ ಸಲ್ಮಾನ್ ಖಾನ್ ಇವರು ತಮ್ಮ ಪ್ರಮಾಣಪತ್ರದಲ್ಲಿ ಆರೋಪಿಯಾದ ನೀವು ಶಿಕ್ಷಕರ/ಪಾಂಶುಪಾಲರ ನೇಮಕಾತಿಗೆ ಜಾಹೀರಾತು ನೀಡಿದ್ದು, ಪಿರ್ಯಾದುದಾರರು ಪ್ರಾಂಶುಪಾಲರ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ನಂತರ ಅವರನ್ನು 12 ತಿಂಗಳ ಅವಧಿಗೆ ದಿಃ 07-06-2019 ರಿಂದ ಒಂದು ತಿಂಗಳಿಗೆ ರೂ. 38,000/- ರಂತೆ ಒಪ್ಪಂದದ

ಪ್ರಕಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ, ನಂತರ ಒಪ್ಪಂದದ ಅವಧಿ ಪೂರ್ಣಗೊಂಡಿದ್ದು ಪಿರ್ಯಾದುದಾರರನ್ನು ಸೇವೆಯಿಂದ ಬಿಡುಗಡೆ ಮಾಡಿ ಸ್ವಲ್ಪ ಮೊತ್ತವನ್ನು ಪಾವತಿ ಮಾಡಿದ್ದು, ಕೊವಿಡ್-19 ಕಾರಣದಿಂದ ಬಾಕಿ ವೇತನವನ್ನು ಪಾವತಿಸಿರುವುದಿಲ್ಲ ಎಂಬ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ ಃ

ಪ್ರಶ್ನೆ: 3 ಃ ಚಾಸಾ.1 ರವರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ ನೀವು ಉಳಿದ ವೇತನ ಹಣಕ್ಕೆ ನೀವು ತನಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಿಂದನೂರು ಶಾಖೆಗೆ ಸೇರಿದ ಚೆಕ್ ನಂ.**027914** ನೇ ಚೆಕ್‌ನ್ನು ಕೊಟ್ಟು ಸದರಿ ಚೆಕ್‌ನ್ನು ದಿಃ 24-12-2021 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ , ಕೂಲಂಬಿ ಶಾಖೆಗೆ ನಗದೀಕರಣಕ್ಕಾಗಿ ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ ಃ

ಪ್ರಶ್ನೆ: 4 ಃ ಚಾಸಾ.1 ರವರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ ನಂತರ ಸದರಿ ಚೆಕ್ ಫಂಡ್ಸ್ ಇನ್‌ಸಫೀಸಿಯೆಂಟ್ ಎಂಬ ಕಾರಣದಿಂದ ಅಮಾನ್ಯಗೊಂಡಿರುತ್ತದೆ ಎಂದು ಮೆಮೋ ಮೂಲಕ ವಾಪಸ್ ಬಂದಿದ್ದರಿಂದ ತಾನು ನಿಮಗೆ ದಿಃ 25-02-2022 ರಂದು ವಕೀಲರ ಮೂಲಕ ನೋಟಿಸನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸಿ ವೇತನದ ಹಣವನ್ನು ಮರುಪಾವತಿಸುವಂತೆ ತಿಳಿಸಿದ್ದರೂ ನೀವು ಹಣವನ್ನು ಮರುಪಾವತಿಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು

ಇಚ್ಛಿಸುತ್ತೀರಿ ?

ಉತ್ತರ ಃ

ಪ್ರಶ್ನೆ 5 : ನೀವು ಹೇಳುವುದು ಏನಾದರೂ ಇದೆಯೇ ?

ಉತ್ತರ ಃ

ಪ್ರಶ್ನೆ 6: ನಿಮ್ಮ ಪರ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಳ್ಳುವಿರಾ ?

ಉತ್ತರ ಃ

(ಆರೋಪಿಯ ಹೇಳಿಕೆಯನ್ನು ಆತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ .)

ಸ್ಥಳ: ಹೊನ್ನಾಳಿ
ದಿನಾಂಕ : 05-11-2024

(ದೇವದಾಸ್ ಹೆಚ್.)
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹೊನ್ನಾಳಿ.